ಅವಳು ತುಂಬ ಸಹಜವಾಗಿರುತ್ತಾಳೆ. ಅವಳ ಜೊತೆಗೆ ಇರುವವರೆಲ್ಲರೂ ಅತಿರೇಕದ ಪಾತ್ರಗಳು. ಆ ಪಾತ್ರಗಳೇ ಹಾಗಿವೆ’ ಎಂದು ವಿವರಿಸುತ್ತಾರೆ ಭೂಮಿ. ಸಾಮಾನ್ಯವಾಗಿ ಡೈಲಾಗ್ ಮತ್ತು ಬಾಡಿ ಲ್ಯಾಂಗ್ವೇಜ್ ಮೂಲಕವೇ ಹಾಸ್ಯ ಹುಟ್ಟಿಸುವುದು ಜನಪ್ರಿಯ ಶೈಲಿ ಆದರೆ ನಮ್ಮ ಸಿನಿಮಾದಲ್ಲಿ ಸಂದರ್ಭದಲ್ಲಿಯೇ ಹಾಸ್ಯ ಹುಟ್ಟುತ್ತದೆ. ಇಲ್ಲಿ ಪಾತ್ರಗಳು ಗಂಭೀರವಾಗಿಯೇ ಇರುತ್ತಾರೆ. ಅವರು ಹಾದುಹೋಗುವ ಸನ್ನಿವೇಶಗಳೇ ಹಾಸ್ಯ ಹುಟ್ಟಿಸುತ್ತವೆ ಎಂಬುದು ಭೂಮಿ ವಿವರಣೆ.

ಈ ಚಿತ್ರದ ನಟನೆ ಭೂಮಿ ಅವರಿಗೆ ಇನ್ನೂ ಹಲವು ಅವಕಾಶಗಳನ್ನು ತಂದುಕೊಡುವ ನಂಬಿಕೆ ಇದೆ. ಈಗಾಗಲೇ ಕೆಲವು ಕಥೆಗಳು ಚರ್ಚೆಯ ಹಂತದಲ್ಲಿಯೂ ಇವೆಯಂತೆ.

‘ನನಗೆ ಹೀರೊಯಿನ್ ಆಗಬೇಕು ಎಂದು ಆಸೆ ಇಲ್ಲ. ಚೆನ್ನಾಗಿ ನಟಿಸುವ ಒಬ್ಬಳು ನಟಿ ಎಂದು ಗುರ್ತಿಸಿಕೊಳ್ಳಲು ಆಸೆ. ಸಿನಿಮಾ ಅಷ್ಟೇ ಅಲ್ಲ, ಎಲ್ಲ ಕ್ಷೇತ್ರಗಳಲ್ಲಿಯೂ ಸೌಂದರ್ಯದ ಕುರಿತಾದ ಕೆಲವು ಇಮೇಜ್‌ಗಳು ಇವೆ. ಅದರಾಚೆಗೆ ಯಾರೂ ಯೋಚಿಸುವುದೇ ಇಲ್ಲ. ಆದರೆ ನಾನು ಯಾವ ಇಮೇಜ್‌ಗೂ ಕಟ್ಟುಬೀಳುವುದಿಲ್ಲ. ಅಂಥ ಇಮೇಜ್‌ಗಳನ್ನು ಕೇರ್ ಮಾಡುವುದೂ ಇಲ್ಲ. ತುಂಬ ಸ್ವತಂತ್ರವಾಗಿ, ಯಾವ ಗಡಿಯೂ ಇಲ್ಲದಂತೆ ಸ್ವಚ್ಛಂದವಾಗಿ ಹಾರಾಡಿಕೊಂಡು ಇರುವವಳು’ ಎನ್ನುವುದು ಭೂಮಿಯ ಸ್ಪಷ್ಟ ಮಾತು.

ನಟನೆ ಎನ್ನುವುದು ಭೂಮಿ ಅವರಿಗೆ ಹೊಸದೇ ಕಾಲ್ಪನಿಕ ಲೋಕವೊಂದನ್ನು ತೆರೆದಿಟ್ಟಿದೆ. ‘ಆ್ಯಕ್ಷನ್ ಮತ್ತು ಕಟ್ ಈ ಎರಡು ಶಬ್ದಗಳ ಮಧ್ಯೆ ಇರುವುದು ಬೇರೆಯದೇ ಲೋಕ. ಅದು ವಿಶಿಷ್ಟವಷ್ಟೇ ಅಲ್ಲ, ತುಂಬ ಗಾಢವಾದ ಜಗತ್ತೂ ಹೌದು’ ಎಂದು ಖುಷಿಯಿಂದ ಹೇಳಿಕೊಳ್ಳುವ ಭೂಮಿ ಸರಿಯಾದ ಅವಕಾಶ ಸಿಕ್ಕರೆ ಕನ್ನಡವನ್ನು ಸಮರ್ಥವಾಗಿ ಬೆಳಗಬಲ್ಲ ಪ್ರತಿಭೆ.



# ಬಾಲಿವುಡ್ ನಭದಲ್ಲಿ ನಭಾ



‘ವಜ್ರಕಾಯ’ ಸಿನಿಮಾದ ಮೂಲಕ ಚಂದನವನಕ್ಕೆ ಕಾಲಿಟ್ಟ ನಭಾ ನಟೇಶ್ ಮಿಂಚಿದ್ದು ತೆಲುಗಿನಲ್ಲಿ. ‘ಅಧುಗೊ’, ‘ಇಸ್ಮಾರ್ಟ್ ಶಂಕರ್’, ‘ಡಿಸ್ಕೋ ರಾಜ’ ಸೇರಿದಂತೆ ಹಲವು ತೆಲುಗು ಸಿನಿಮಾಗಳಲ್ಲಿ ಮಿಂಚಿದ್ದ ಅವರು ಈಗ ಬಾಲಿವುಡ್‌ಗೂ ಜಿಗಿದಿದ್ದಾರಂತೆ. ಅಲ್ಲಿ ಹೃತಿಕ್ ರೋಷನ್ ಜೊತೆಗೆ ತೆರೆಯನ್ನು ಹಂಚಿಕೊಳ್ಳುವ ಅವಕಾಶ ಗಿಟ್ಟಿಸಿಕೊಂಡಿದ್ದಾರಂತೆ.

ಹೌದು, ಹಿಂದಿಯ ವೆಬ್ ಸರಣಿಯೊಂದರಲ್ಲಿ ಅವಕಾಶ ಗಿಟ್ಟಿಸಿಕೊಂಡಿರುವ ನಭಾ, ಹೃತಿಕ್ ರೋಷನ್ ಜೊತೆಯಲ್ಲಿ ತೆರೆ ಹಂಚಿಕೊಳ್ಳಲಿದ್ದಾರೆ ಎಂಬ ಸುದ್ದಿ ಎಲ್ಲೆಡೆ ಹರಿದಾಡುತ್ತಿದೆ. ಇದು ‘ದಿ ನೈಟ್ ಮ್ಯಾನೇಜರ್’ ವೆಬ್ ಸರಣಿಯ ಹಿಂದಿ ಅವತರಣಿಕೆಯಾಗಿದ್ದು, ಹೃತಿಕ್ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಕನ್ನಡ, ತೆಲುಗಿನ ನಂತರ ಹಿಂದಿಗೆ ಹೆಜ್ಜೆಯಿಟ್ಟಿರುವ ನಭಾ ಅಲ್ಲಿನ ನಭದಲ್ಲಿಯೂ ತಾರೆಯಾಗಿ ಮಿಂಚಲಿದ್ದಾರೆಯೇ ಎಂಬುದನ್ನು ಕಾದು ನೋಡಬೇಕು.

# ತೆರೆಯ ಮೇಲೆ ಸಂಕೇಶ್ವರ!

ಸಾಧಕರ ಜೀವನಾಧಾರಿತ ಚಿತ್ರಗಳ ಜಾನರ್‌ಗಳಿಗೆ ಇದು ಉಬ್ಬರದ ಕಾಲ. ಹಿಂದಿಯಲ್ಲಂತೂ ಅಂಥ ಸಾಲು ಸಾಲು ಚಿತ್ರಗಳು ತೆರೆಗೆ ಬರುತ್ತಿವೆ. ಹಾಗೆ ನೋಡಿದರೆ ಕನ್ನಡ ಚಿತ್ರರಂಗದಲ್ಲಿ ಇಂಥ ಪ್ರಯತ್ನಗಳು ಸ್ವಲ್ಪ ಕಮ್ಮಿ ಎಂದೇ ಹೇಳಬೇಕು. ಆ ಕೊರತೆಯನ್ನು ತುಂಬುವುದಕ್ಕೋಸ್ಕರವೇ ಎಂಬಂತೆ ಕನ್ನಡದ ಯಶಸ್ವಿ ಉದ್ಯಮಿ ವಿಜಯ ಸಂಕೇಶ್ವರ ಅವರ ಬದುಕನ್ನು ಆಧರಿಸಿದ ಸಿನಿಮಾವೊಂದು ಸೆಟ್ಟೇರಿದೆ.

ಸಂಕೇಶ್ವರ ಅವರ ಸಂಸ್ಥೆಯ ಹೆಸರಾದ ‘ವಿಜಯಾನಂದ’ವನ್ನೇ ಈ ಚಿತ್ರಕ್ಕೂ ಟೈಟಲ್ ಆಗಿ ಬಳಸಿಕೊಳ್ಳಲಾಗುತ್ತಿದೆ. ಈ ಚಿತ್ರವನ್ನು ವಿಜಯ ಸಂಕೇಶ್ವರ ಅವರ ಮಗ ಆನಂದ ಸಂಕೇಶ್ವರ ಅವರು ತಮ್ಮ ‘ವಿಆರ್‌ಎಲ್ ಫಿಲಂ ಪ್ರೊಡಕ್ಷನ್ಸ್’ ನಿರ್ಮಾಣ ಸಂಸ್ಥೆಯಡಿಯಲ್ಲಿ ನಿರ್ಮಾಣ ಮಾಡುತ್ತಿದ್ದಾರೆ.

ಈ ಹಿಂದೆ ‘ಟ್ರಂಕ್’ ಎಂಬ ಸಿನಿಮಾ ಮೂಲಕ ಗಮನಸೆಳೆದಿದ್ದ ರಿಷಿಕಾ ಶರ್ಮ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ನಿಹಾಲ್ ವಿಜಯ ಸಂಕೇಶ್ವರ ಅವರ ಪಾತ್ರದಲ್ಲಿ ನಟಿಸುತ್ತಿದ್ದಾರೆ. ತೆಲುಗು, ಮಲಯಾಳಂ ಸಿನಿಮಾಗಳಿಗೆ ಸಂಗೀತ ಸಂಯೋಜಕರಾಗಿ ಕೆಲಸ ಮಾಡಿರುವ ಗೋಪಿ ಸುಂದರ್ ಈ ಚಿತ್ರಕ್ಕೆ ಸಂಗೀತ ನಿರ್ದೇಶಕರು. ಈಗಾಗಲೇ ಚಿತ್ರದ ಉಳಿದ ತಂತ್ರಜ್ಞರು ಮತ್ತು ತಾರಾಗಣದ ಆಯ್ಕೆಯೂ ನಡೆದಿದ್ದು ಸದ್ಯದಲ್ಲಿಯೇ ಎಲ್ಲ ವಿವರಗಳನ್ನು ಬಿಡುಗಡೆಗೊಳಿಸುವುದಾಗಿ ಚಿತ್ರತಂಡ ಹೇಳಿದೆ.

